## ಶಿವಮೊಗ್ಗ ನಗರದಲ್ಲಿ ಮಿನಿ ವಿಮಾನ ನಿಲ್ದಾಣ ಪ್ರಾರಂಭಿಸುವುದು

2565(3195) ಶ್ರೀ ಚಂದ್ರಶೇಖರಪ್ಪ.ಎಚ್.ಎಂ (ಶಿವಮೊಗ್ಗ) : ಮಾನ್ಯ ನಾಗರೀಕ ವಿಮಾನಯಾನ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಸರ್ಕಾರದ ವತಿಯಿಂದ ವಿಮಾನ ನಿಲ್ದಾಣ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದರೆ, ಇದರ ಸರ್ವೇ ಕಾರ್ಯ ಮುಗಿದಿದೆಯೇ; ಇದನ್ನು ಯಾವಾಗ ಪ್ರಾರಂಭವಾಗುವುದು (ವಿವರ ಒದಗಿಸುವುದು)?

ಶ್ರೀ ಟಿ.ಜಾನ್ (ನಾಗರೀಕ ವಿಮಾನಯಾನ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ರಾಜ್ಯ ಸಚಿವರು) :

ಅ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ) ಜಿಲ್ಲಾಧಿಕಾರಿ, ಶಿವಮೊಗ್ಗರವರು ಶಿವಮೊಗ್ಗದಿಂದ 20 ಕಿಲೋಮೀಟರ್ ದೂರದ ರಾಷ್ಟ್ರೀಯ ಹೆದ್ದಾರಿ 206ಕ್ಕೆ ಲಗತ್ತಾಗಿರುವ 788 ಎಕರೆ ಜಮೀನನ್ನು ಗುರುತಿಸಿದ್ದರು. ಭಾರತೀಯ ವೈಮಾನಿಕ ಪ್ರಾಧಿಕಾರದವರು ಮೇಲಿನ ನಿವೇಶನವನ್ನು ತಪಾಸಣೆ ಮಾಡಿರುತ್ತಾರೆ ಮತ್ತು ಅದು ವಿಮಾನ ನಿಲ್ದಾಣಕ್ಕೆ ಸೂಕ್ತವಾಗಿರುವುದಿಲ್ಲವೆಂದು ಅಭಿಪ್ರಾಯಿಸಿರುತ್ತಾರೆ. ಆದ್ದರಿಂದ, ಪರ್ಯಾಯವಾದ ಸೂಕ್ತವಾದ ನಿವೇಶನವನ್ನು ಗುರುತಿಸಬೇಕಾಗಿದೆ.

## ಶಿವಮೊಗ್ಗ ನಗರದ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ಸಿ.ಓ.ಡಿ. ಪ್ರಕರಣಗಳು

2566(3196) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1999ರಿಂದ ಇಲ್ಲಿಯವರೆಗೆ ಸರ್ಕಾರದ ವತಿಯಿಂದ ಸಿ.ಓ.ಡಿ. ತನಿಖೆ ನಡೆಸಲಾದ ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟ, ಪ್ರಕರಣಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) 3 (ಮೂರು)

1) ಶ್ರೀಮತಿ ಆಶಾ ಕೋಂ ಪರಮೇಶ್ವರಪ್ಪ ಇವರ ವರದಕ್ಷಿಣೆ ಸಾವು ಪ್ರಕರಣದಲ್ಲಿ ಸಿ.ಓ.ಡಿ. ತನಿಖೆ ನಡೆಸಿ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ.

2) ಶ್ರೀ ಅಭಿಷೇಕ್ ಬಿನ್ ರಾಜೇಶ್ವರಿ ಎಂಬ ಮಗುವಿನ ಸಾವು ಪ್ರಕರಣದಲ್ಲಿ ತನಿಖೆ ಮುಗಿಸಿದ್ದು ಅಭಿಷೇಕ್‌ನ ಸಾವು ಆಕಸ್ಮಿಕವಾಗಿದ್ದು, ಬಿ ಅಂತಿಮ ವರದಿಯನ್ನು ನ್ಯಾಯಾಯಲಕ್ಕೆ ಸಲ್ಲಿಸಲಾಗಿದೆ.

3) ಶ್ರೀ ಬಿ. ನಾಗರಾಜ, ಹೊಳೆಬೆನವಳ್ಳಿ ಗ್ರಾಮ ಇವರ ಕೊಲೆ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಖುಲಾಸೆಯಾದ ನಂತರ ಪುನಃ ತನಿಖೆ ಮಾಡಲು ಕಾನೂನಿನಲ್ಲಿ ಅವಕಾಶ ಇಲ್ಲದಿರುವುದರಿಂದ ತನಿಖೆ ಕೈಬಿಡಲಾಗಿದೆ.

## ಶಿವಮೊಗ್ಗ ನಗರ ಕಾರಾಗೃಹ ಅಭಿವೃದ್ಧಿ

2567(3197) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನರಗದಲ್ಲಿರುವ ಕೇಂದ್ರ ಕಾರಾಗೃಹ ಸುತ್ತಲೂ ರಕ್ಷಣಾ ಗೋಡೆ ನಿರ್ಮಿಸುವ ಯೋಜನೆ ಸರ್ಕಾರದ ಪ್ರಸ್ತಾವನೆಯಲ್ಲಿದೆಯೆ? ಈ ಯೋಜನೆಯ ಉದ್ದೇಶಿತ ಮೊತ್ತವೆಷ್ಟು? ಯಾವಾಗ ಪ್ರಾರಂಭಿಸಲಾಗುವುದು;

ಆ) ಶಿವಮೊಗ್ಗ ಕಾರಾಗೃಹದಲ್ಲಿ ಹೊಡೆದಾಟ, ಕೊಲೆ ಪ್ರಕರಣಗಳು ನಡೆದಿರುವುದು ಸರ್ಕಾರಕ್ಕೆ ಮಾಹಿತಿ ಬಂದಿದೆಯೇ; ಇಂತಹ ಪ್ರಕರಣಗಳಲ್ಲಿ ಅಧಿಕಾರಿಗಳ ನಿರ್ಲಕ್ಷತನ ಹಾಗೂ ಕರ್ತವ್ಯ ಲೋಪವಾಗಿರುವ ಬಗ್ಗೆ ಸರ್ಕಾರದ ವತಿಯಿಂದ ಏನು ಕ್ರಮ ಜರುಗಿಸಲಾಗಿದೆ; ಕಾರಾಗೃಹದಲ್ಲಿ ವಿಚಾರಣಾಧೀನ ಖೈದಿಗೆ ಅಥವಾ ಶಿಕ್ಷೆಗೆ ಒಳಪಟ್ಟ ಖೈದಿಗೆ ಸಹಜ ಅಥವಾ ಅಸಹಜ ಸಾವು ಸಂಭವಿಸಿದರೆ, ಪರಿಹಾರ ನೀಡಲಾಗುವುದೇ?

ಶ್ರೀ ರಾಜ ಅಮರೇಶ್ವರ್ ನಾಯಕ (ಬಂದೀಖಾನೆ ಸಚಿವರು) :

ಅ) ಇದೆ. ಈ ಯೋಜನೆಗೆ ರೂ. 10.00 ಲಕ್ಷಗಳನ್ನು ನಿಗಧಿಗೊಳಿಸಿದೆ. ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ಲೋಕೋಪಯೋಗಿ ಇಲಾಖೆಯಿಂದ ಟೆಂಡರ್ ಕರೆಯಲಾಗಿದ್ದು ಆದಷ್ಟು ಶೀಘ್ರ ಪ್ರಾರಂಭಿಸಲಾಗುವುದು.

ಆ) ಬಂದಿದೆ. ಈ ಪ್ರಕರಣದಲ್ಲಿ ಯಾವುದೇ ಅಧಿಕಾರಿ/ಸಿಬ್ಬಂದಿಗಳು ಶಾಮೀಲಾಗಿರುವುದಿಲ್ಲ. ಕಾರಾಗೃಹಗಳಲ್ಲಿನ ಬಂದಿಗಳಿಗೆ ಸಹಜ ಅಥವಾ ಅಸಹಜ ಸಾವು ಸಂಭವಿಸಿದರೆ ಪರಿಹಾರ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

**ಕೊರಟಗೆರೆ ತಾಲ್ಲೂಕಿನಲ್ಲಿ ಆರಕ್ಷಕ ಠಾಣೆ ಮಂಜೂರಾತಿ**

2569(3351) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ಕೋಳಾಲದಲ್ಲಿ ಹೊಸದಾಗಿ ಆರಕ್ಷಕ ಉಪ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾವನೆಗೆ ಇದೂವರೆವಿಗೂ ಮಂಜೂರಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ಈ ಆರಕ್ಷಕ ಉಪ ಠಾಣೆ ಮಂಜೂರಾತಿಗೆ ವಿಳಂಬ ಮಾಡಿರುವ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು;

ಇ) ಇದೇ ಸಾಲಿನಲ್ಲಿ ಆರಕ್ಷಕ ಉಪ ಠಾಣೆ ಪ್ರಾರಂಭ ಮಾಡಿ ಈ ಭಾಗದ ಜನತೆಗೆ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಕೊರಟಗೆರೆ ತಾಲ್ಲೂಕು ಕೋಳಾಲದಲ್ಲಿ ಒಂದು ಆರಕ್ಷಕ ಪೊಲೀಸ್ ಠಾಣೆಯ ಸೃಜನೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಜನತೆಗೆ ಅನುಕೂಲವಾಗುವ ರೀತಿಯಲ್ಲಿ ಪರಿಶೀಲಿಸಲಾಗುವುದು.

**ಕಾರ್ಕಳ ನಗರಕ್ಕೆ ನೀರು ಸರಬರಾಜು**

2570(3209) ಶ್ರೀ ಗೋಪಾಲ ಬಂಡಾರಿ (ಕಾರ್ಕಳ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?